



## ಜೋಗತಿಯರ ಸಂಗಮ

ನವರಾತ್ರಿಯಲ್ಲಿ ಆದಿಶಕ್ತಿ ದೇವತೆಯನ್ನು ಎಲ್ಲೆಡೆ ದೇವಿ ಆರಾಧನೆ ಮಾಡುವುದುಂಟು. ಜಗದಾಂಬೆಯೂ ಆಗಿರುವ ಆದಿಶಕ್ತಿಯನ್ನು ಹಲವು ಹೆಸರುಗಳಿಂದ, ಹಲವು ರೂಪಗಳಿಂದ ಭಕ್ತರು ಪೂಜಿಸುತ್ತಾರೆ. ಮನೆಯಲ್ಲಿ ಶುಭ ಕಾರ್ಯ ನಡೆದಾಗ ತುಳಜಾಪುರ ಅಂಬಾಭವಾನಿಯ 'ಗೊಂದಲ' ಹಾಕುತ್ತಾರೆ. ಆ ವೇಳೆ ಗೊಂದಲಿಗರು ಇಡೀ ರಾತ್ರಿ, 'ಬಾರೇ ಜಗದಂಬಾ ನೀ ಬಾರೇ..., ಬಾರೇ ನೀ ಬಾರೇ ಬಂಗಾರದಂತಾ ಮೊಗವ ತೋರೆ... ಮತ್ತು 'ಎಲ್ಲಿ ಕಾಣೆ ಎಲ್ಲಿ ಕಾಣೆ, ಬಗಳಂಬಾ ನಿನ್ನ, ಎಲ್ಲಿ ಕಾಣೆ ಎಲ್ಲಿ ಕಾಣೆ'ಯಂತಹ ದೇವಿ ಪದಗಳನ್ನು ಚೌಡಕಿಯೊಂದಿಗೆ ಹಾಡಿ ಬೆಳಗು ಹರಿಸುತ್ತಾರೆ. ಆಗ ದೇವಿ ಮೈಮೇಲೆ ಬಂದು ಭಕ್ತರು 'ದೀವಟಿಗೆಯ ಪತ್ತಾ' ಆಡುತ್ತಾರೆ. ಈ ನವರಾತ್ರಿಯ ದೀಪ ಹಾಕಿದ ದಿನಗಳಲ್ಲಿ ಜೋಗತಿಯರು ಬಂದು ದೇವಿಯನ್ನು ವಾದ್ಯಗಳೊಂದಿಗೆ ಸ್ತುತಿಸುತ್ತಾರೆ. ಇದು ಉತ್ತರ ಕರ್ನಾಟಕದಲ್ಲಿ ಕಂಡುಬರುವ ವಿಶಿಷ್ಟ ಸಂಪ್ರದಾಯ.

–ಶ್ರೀನಿವಾಸ ಜಾಲವಾದಿ, ಸುರಪುರ



## ಸಾವಿರ ವರ್ಷ ಹಳೆಯ ಅನಂತ!

ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನ ಹೊಳಲು ಗ್ರಾಮದಲ್ಲಿ 1000 ವರ್ಷಗಳ ಹಳೆಯ ದೇವಾಲಯ ಹೊಳಲು ಅನಂತ ಶಯನ ದೇಗುಲವಿದೆ. ದೇಗುಲದಲ್ಲಿ 13 ಅಡಿ ಉದ್ದ, 2 ಅಡಿ ಎತ್ತರದ ಆದಿಶೇಷನ ಮೇಲೆ ಮಲಗಿರುವ ಚತುರ್ಭುಜಧಾರಿ ಪನ್ನಗಶಯನ ಅನಂತ ಪದ್ಮನಾಭ ಪ್ರಸನ್ನ ವದನವನ್ನು ಕಣ್ತುಂಬಿಕೊಳ್ಳಬಹುದು. ಸೂಕ್ಷ್ಮವಾಗಿ ಅದನ್ನು ಕಂಡಾಗ ಅದರ ವಾಸ್ತು ಕೆತ್ತನೆಯು ವಿಸ್ಮಯ ಮೂಡಿಸುತ್ತದೆ. ಅನಂತ ಶಯನ ಜೊತೆಗೆ ಗಣಪತಿ, ಮಹಾಲಕ್ಷ್ಮಿ ವಿಗ್ರಹಗಳೂ ಇವೆ.

'ಹೊಳಲು ಗ್ರಾಮದಲ್ಲಿ ಒಂದು ಸಾವಿರ ವರ್ಷಗಳ ಹಿಂದೆ 64 ಅಂಕಣದ ದೇಗುಲವಿತ್ತು. ಅದು ಶಿಥಿಲಗೊಂಡು ಹಾಳಾದ ಬಳಿಕ ಸಾಲಿಗ್ರಾಮ ಶಿಲೆಯ ಅನಂತ ಶಯನನಿಗೆ ಬಯಲೇ ಆಲಯವಾಗಿತ್ತು. ಇದನ್ನು ಕಂಡ ಅಂದಿನ ವಿಜಯನಗರ ಸಾಮ್ರಾಜ್ಯದ ಅರಸನಾಗಿದ್ದ ರಾಮರಾಯರು ಹದಿನೈದನೇ ಶತಮಾನದಲ್ಲಿ ಹಂಪಿ ಸಮೀಪ ಇರುವ ಅನಂತಶಯನಗುಡಿಯಲ್ಲಿ ಈ ವಿಗ್ರಹವನ್ನು ಪ್ರತಿಷ್ಠಾಪಿಸಲು ನಿರ್ಧರಿಸಿ, ಅದಕ್ಕಾಗಿ ಮೂರು ಮಹಾ ದ್ವಾರಗಳ ದೇವಾಲಯ ಕಟ್ಟಿಸಿದ. ಆದರೆ ಹೊಳಲು ಗ್ರಾಮದ ಭಕ್ತರು ಮೂರ್ತಿಯನ್ನು ಸ್ಥಳಾಂತರಿಸಲು ವಿರೋಧಿಸಿದ ಕಾರಣಕ್ಕೆ ರಾಮರಾಯರು ಆ ಯೋಜನೆಯನ್ನು ಅಲ್ಲಿಗೇ ಕೈ ಬಿಟ್ಟರು' ಎಂಬ ಐತಿಹ್ಯವಿದೆ. ಇದಕ್ಕೆ ಪೂರಕವಾಗಿ ಹಂಪಿಯ ಸಮೀಪದ ಅನಂತಶಯನಗುಡಿಯ (ಗ್ರಾಮ) ಸುಂದರವಾದ ದೊಡ್ಡ ದೇವಾಲಯ ಮತ್ತು ಅದರ ಗರ್ಭಗುಡಿಯಲ್ಲಿ ವಿಗ್ರಹವಿಲ್ಲದಿರುವುದನ್ನು ಕಾಣಬಹುದು.

–ಮೇಘನಾ ರಘುನಂದನ್, ಹೂವಿನ ಹಡಗಲಿ

## ಸುಲಿದ ಬಾಳೆಗೆ ಬಾಯ್ತೆರೆವ ಕರು!

ಮಾಗಡಿಯ ರಂಗನಾಥ ದೇಗುಲ ಬಳಿಯ ಆಕರ್ಷಣೆ ಈ ಚಿತ್ರದಲ್ಲಿ ಕಾಣುತ್ತಿರುವ ಕರು. ಆರೈಕೆಗೆಂದು ಯಾರೇ ಬಂದರೂ ಅವರೊಂದಿಗೆ ಅಷ್ಟೇ ನಯ ನಾಜೂಕಿನಿಂದ ವರ್ತಿಸುವ ಗುಣ ಅದರದ್ದು. ದೇಗುಲಕ್ಕೆ ಬರುವ ಭಕ್ತರು ಈ ಕರು ನೋಡಿ ಆಕರ್ಷಿತಗೊಂಡು ಪೂಜೆಗೆಂದು ತಂದಿದ್ದ ಬಾಳೆಹಣ್ಣನ್ನು ಕೊಡುವುದು ಸಹಜ.

ಆದರೆ ಬಾಳೆ ಹಣ್ಣನ್ನು ಸಿಪ್ಪೆ ಸುಲಿಯದೇ ಕೊಟ್ಟರೆ ಮಾತ್ರ ತಿನ್ನಲ್ಲ. ನನಗೂ ಇದೇ ಅನುಭವವಾಯಿತು. ಬಾಳೆಹಣ್ಣೆಗೇಕೆ ಈ ಕರು ಮುಖ ತಿರುಗಿಸುತ್ತದೆ ಅನ್ನುವ ಪ್ರಶ್ನೆ ಕಾಡಿತು. ಆಗ ಸ್ಥಳೀಯರು ಬಂದು, 'ಬಾಳೆ ಹಣ್ಣಿನ ಸಿಪ್ಪೆಯನ್ನು ಸುಲಿದು ಕೊಡು. ಅದು ತಿನ್ನುತ್ತದೆ' ಎಂದರು. ಹಾಗೇ ಮಾಡಿದೊಡನೆ ಕರು ಹಣ್ಣನ್ನು ಲಬಕ್ಕನೆ ಬಾಯಿಗಿಳಿಸಿತು. ದೇಗುಲದ ಬಳಿಯ ಈ ಸುಂದರ ದೃಶ್ಯವು ಮನಸ್ಸಿಗೆ ಮುದ ನೀಡುತ್ತದೆ.

–ವರ್ಷಾ ಎಂ., ಬೆಂಗಳೂರು



**ನೀವೂ ಬರೆಯಿರಿ**

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ. **ವಿಳಾಸ:** editorsu@sudha.co.in